

ಕನ್ನಡ ವಿವೇಕ

# ಶಾಸನದ ಬೆನ್ನತ್ತಿ ಮೊದಲ ಸಹಸ್ರಮಾನಕ್ಕೆ ಭೇಟಿ

ಐಜೂರು ಬೆಟ್ಟದ ನೆತ್ತಿಯ ಮೇಲೆ...

**ರಾಮನಗರ ತಾಲ್ಲೂಕಿನ ಐಜೂರಿನಲ್ಲಿರುವ ಪಳೆಯುಳಿಕೆಗಳ ಬೆನ್ನತ್ತಿದ ಲೇಖಕರು ಮುಖಾಮುಖಿಯಾದುದು ಅಪೂರ್ವ ಶಾಸನವೊಂದನ್ನು. ನೂರೆಂಟು ಯುದ್ಧಗಳಲ್ಲಿ ಕಾದಾಡಿದ ನೀತಿಮಾರ್ಗನೆಂಬ ರಾಜನೊಬ್ಬ, ಯುದ್ಧ ಮತ್ತು ಹಿಂಸೆಯ ನಿರರ್ಥಕತೆಯನ್ನು ಅರಿತ ವಿವೇಕದ ಸ್ಮೃತಿಗಳು ಅಲ್ಲಿದ್ದವು.**

**ಡಾ. ಕೀರ್ತಿ ಮಲ್ಹೋತ್ರ**

ರಾಮನಗರದ ರೈಲು ನಿಲ್ದಾಣದಲ್ಲಿ ಇಳಿದು, ನೇರ ರಸ್ತೆಯಲ್ಲಿ ಬಸ್ ನಿಲ್ದಾಣದ ಕಡೆಗೆ ನಾನು ನಡೆಯುವಾಗೆಲ್ಲ, ದೂರದ ದಿಗಂತದಲ್ಲಿ ಬೆಟ್ಟವೊಂದರ ಶಿಖರ ಭಾಗ ಕಾಣುತ್ತಿತ್ತು. ಅದನ್ನು ಸ್ಥಳೀಯರು 'ಐಜೂರು ಬೆಟ್ಟ' ಎನ್ನುತ್ತಾರೆ. ಆದರೆ ಬಸ್ ನಿಲ್ದಾಣಕ್ಕೆ ತಲುಪುವ ಹೊತ್ತಿಗೆ ಆ ಬೆಟ್ಟ ಕಣ್ಮರೆಯಾಗುತ್ತಿತ್ತು. 'ಐಜೂರು' ಎಂದರೇನು ಅರ್ಥವಾಗಿರಲಿಲ್ಲ; ಎಂಬತ್ತರ ವಯಸ್ಸು ದಾಟಿದ ಹಿರಿಯರಾದ ರಾಮಪ್ಪ ನನಗೆ ವಿವರಣೆ ಕೊಟ್ಟರು. ಹಳೆಯ ಕಾಲದಲ್ಲಿ ಇಲ್ಲಿ ಬೆಟ್ಟದ ಬುಡದಲ್ಲಿ ಕೇವಲ ಐದು ಮನೆಗಳು ಇದ್ದವಂತೆ. ಹಾಗಾಗಿ ಎಲ್ಲರೂ ಈ ಸ್ಥಳವನ್ನು 'ಐದು ಮನೆ ಊರು' ಎಂದು ಕರೆದರಂತೆ. ಅದೇ ಬರುತ್ತಾ ಬರುತ್ತಾ 'ಐದೂರು', 'ಐಜೂರು' ಆಗಿದೆ ಎಂದರು.

1905ರ 'ಎಪಿಗ್ರಾಫಿಯ ಕರ್ನಾಟಿಕ'ದ ಒಂಬತ್ತನೇ ಹೊತ್ತಗೆ, ಐಜೂರಿನಲ್ಲಿ 1351ರ ಶಾಸನವೊಂದನ್ನು ಕಂಡುದಾಗಿ ಹೇಳುತ್ತದೆ. 'ಕ್ಲೋಸ್‌ಪೇಟ್ ಹೋಬಳಿಯ ಐಜೂರು ಗ್ರಾಮದ ಮಾರೆಮ್ಮನ ದೇವಾಲಯದ ಬಳಿ' ಒಂದು ಕಲ್ಲಿನ ಮೇಲೆ ಕಂಡ ಶಾಸನವದು. ರಾಮನಗರ ಪಟ್ಟಣಕ್ಕೆ ಹಿಂದೆ 'ಕ್ಲೋಸ್‌ಪೇಟ್' ಎಂಬ ಹೆಸರಿತ್ತು. ಈ ಶಾಸನವನ್ನು ಹುಡುಕಿ ಹೋಗಿ ನೋಡುವ ಕುತೂಹಲ ಮೂಡಿತು.

ರೈಲಿನಲ್ಲಿ ರಾಮನಗರ ತಲುಪಿದವನು ಐಜೂರಿಗೆ ನಡೆದು, ಬಲು ಜನಸಂದಣಿಯ ಹೆದ್ದಾರಿಯ ಬಳಿಯ ಅಂಗಡಿಯವರನ್ನು 'ಶಾಸನ ಇರುವ ಮಾರಮ್ಮನ ಗುಡಿ'ಯ ಬಗ್ಗೆ ವಿಚಾರಿಸಿದೆ. 'ಗೊತ್ತಿಲ್ಲ' ಎಂಬುದೊಂದೇ ಉತ್ತರವಾಗಿತ್ತು. ಸರಿ, ಉಳಿದುದೊಂದೇ ಮಾರ್ಗ; ಐಜೂರಿನ ಪ್ರತಿ ಗಲ್ಲಿಯಲ್ಲಿ ನಡೆದು, ಪ್ರತಿ ದೇವಸ್ಥಾನದ ಒಳಗೆ ಹಾಗೂ ಸುತ್ತಮುತ್ತ ಹುಡುಕುವುದು. ಇಲ್ಲಿ ಕೆಲವು ಕಾಡು ಹೆಂಚಿನ ಮಣ್ಣು ಗೋಡೆಯ



ಐಜೂರಿನ ಮಾರಮ್ಮನ ದೇವಸ್ಥಾನದಲ್ಲಿ ಕ್ರಿ.ಶ. 1351ರ ಶಾಸನ, ಶ್ರೀ ವೀರ ಬುಕ್ಕಣ್ಣ ಒಡೆಯರು ಆಳುವಾಗ ನೀಡಿದ ದಾನದ ವಿವರಗಳಿವೆ

ಮನೆಗಳು ಹಿಂದಿನಂತೆಯೇ ಇದ್ದರೂ, ಐಜೂರು ಈಗ ರಾಮನಗರದ ಭಾಗವಾಗಿ ಅತ್ಯಾಧುನಿಕ ಕಟ್ಟಡಗಳು ಪ್ರತಿ ರಸ್ತೆಯಲ್ಲಿ ಎದ್ದು ನಿಂತಿವೆ. ಹೀಗೇ ನಡೆಯುತ್ತಾ ಅಲೆವಾಗ, ಒಂದು ದೊಡ್ಡ ಮಹಡಿ ಮನೆಯ ಹಿಂಭಾಗದಲ್ಲಿ, ಬಲು ಇಕ್ಕಟ್ಟಿನಲ್ಲಿ ಒಂದು ಸಣ್ಣ ದೇವಸ್ಥಾನದ ಪುಟ್ಟ ಗೋಪುರ ಕಾಣಿಸಿತು. ಹತ್ತಿರಕ್ಕೆ ಬಂದು ನೋಡಿದಾಗ, ಅದರ ಈಗಿನ ಹೆಸರು 'ಶ್ರೀ ಕುಕ್ಕಲ್ಲ ಮಹಾದೇವಮ್ಮ ಮಾರಮ್ಮ ದೇವಸ್ಥಾನ' ಎಂದಿತ್ತು. ಎಪಿಗ್ರಾಫಿಯಾದ ಮಾರಮ್ಮನ ಗುಡಿ ಇದೇ ಆಗಿರಬಹುದೆ ಎಂದು ಒಳಹೊಕ್ಕೆ. ಅದೋ ನೇರ ಎದುರಿಗೆ, ನೆಟ್ಟಗೆ ನಿಂತ ಕಲ್ಲಿನ ಮೇಲೆ ಬಲು ಹಳೆಯದಾದ ಆಂಜನೇಯನ ಕೆತ್ತನೆ ಕಾಣಿಸಿತು. ಅದರ ಬಗಲಿಗೆ ಬೃಂದಾವನವಿತ್ತು. ಅದರ ಹಿಂಬದಿಯಲ್ಲಿ ಒಂದು ಅಗಲವಾದ ಕಲ್ಲು ಕಂಡಿತು, ಅದರ ಮೇಲೆ ಕೆತ್ತಿದ ಅಕ್ಷರಗಳಿದ್ದವು. ಎಪಿಗ್ರಾಫಿಯಾ ಶಾಸನದಲ್ಲಿ 19 ಸಾಲುಗಳು ಇರುವುದನ್ನು ಹೇಳುತ್ತದೆ, ಇಲ್ಲಿ ಈಗ 11 ಸಾಲುಗಳಷ್ಟೆ ಕಾಣಿಸುತ್ತಿದ್ದವು; ಕಾರಣ ಕಲ್ಲು ಭೂಮಿಯಲ್ಲಿ ಹೂತು ಹೋಗಿದೆ. ದೇವಾಲಯ ನವೀಕರಣದ ಸಮಯದಲ್ಲಿ ಮತ್ತಷ್ಟು ಸಿಮೆಂಟು ಬಿದ್ದು ನೆಲದ ಎತ್ತರ ಏರಿದೆ.

ಈ ಶಾಸನದಲ್ಲಿ 'ಶ್ರೀವೀರ ಬುಕ್ಕಣ್ಣ ವೊಡೆಯರು ಪ್ರಿಥವೀರಾಜ್ಯಂಗೈವಿತ್ತಿರಲು' – ಪೃಥ್ವಿ ರಾಜ್ಯವನ್ನು